ಬಿಟ್ಟ ನಂತರ ಮಡಿಗಳನ್ನು ಚಿತ್ರದಲ್ಲಿ ತೋರಿಸಿದಂತೆ ಹುಲ್ಲು ಅಥವಾ ಗರಿಗಳಿಂದ ಮುಚ್ಚಬೇಕು. ಮಡಿಗಳಿಗೆ ನೆರಳಾಗುವಂತೆ ಚಪ್ಪರ ಹಾಕುವುದು ಅವಶ್ಯವಿರುತ್ತದೆ. ನೆರಳು ಕೊಡುವ ದೊಡ್ಡ ಗಿಡಗಳ ತಳದಲ್ಲಿ ಮಡಿಗಳನ್ನು ಮಾಡಿದ್ದರೆ, ಚಪ್ಪರದ ಅವಶ್ಯಕತೆ ಇರುವುದಿಲ್ಲ.

2. ನಂತರ ಮಡಿಗಳಲ್ಲಿ ತೇವಾಂಶ (65–70%) ಕಾಪಾಡಲು ನಿಗದಿತ ಸಮಯದಲ್ಲಿ ನೀರನ್ನು ಮಡಿಗಳ ಮೇಲ್ಭಾಗದಲ್ಲಿ ಸಿಂಪರಣೆ ಮಾಡಬೇಕು.
3. ಸುಮಾರು 30 ರಿಂದ 45 ದಿನಗಳಲ್ಲಿ ಉಪಯೋಗಿಸಿದ ತ್ಯಾಜ್ಯ ಪದಾರ್ಥಗಳು ಮತ್ತು ಅವುಗಳಿಗೆ ಮಾಡಿದ ಉಪಚಾರಕ್ಕೆ ಅನುಗುಣವಾಗಿ, ಎರೆಹುಳು ಗೊಬ್ಬರವು ಮಡಿಗಳ ಮೇಲ್ಭಾಗದಲ್ಲಿ ಸಂಗ್ರಹವಾಗುತ್ತದೆ. ಈ ಸಮಯಕ್ಕೆ ಸಂಗ್ರಹಗೊಂಡ ಎರೆಹುಳು ಗೊಬ್ಬರ ಅಂದಾಜು 1/3 ರಷ್ಟು ಇರುತ್ತದೆ. ನಂತರ, ಈ ತೆರನಾಗಿ ಸಂಗ್ರಹವಾಗಿರುವ ಗೊಬ್ಬರವನ್ನು ಮಡಿಯಿಂದ ತೆಗೆದು ನೆರಳಲ್ಲಿ ಒಣಗಿಸಿ(ಶೇ. 25 ರಿಂದ 30 ರಷ್ಟು ತೇವಾಂಶವಿರುವಂತೆ) ಪಾಲಿಥಿನ್ ಚೀಲಗಳಲ್ಲಿ ತುಂಬಿಡಬೇಕು. ಇಲ್ಲವೇ ಸಿಮೆಂಟ ಡೋಣಿಗಳಲ್ಲಿ ಅಂಕಣದಲ್ಲಿ ಸಂಗ್ರಹಿಸಿಡಬಹುದು.
4. ಈ ರೀತಿಯಲ್ಲಿ ಪ್ರತಿ ಕಾಂಪೋಸ್ಟಿಂಗನಲ್ಲಿ ಎರಡರಿಂದ ಮೂರು ಸಲ (30–45 ದಿನಗಳ ಅಂತರದಲ್ಲಿ) ಗೊಬ್ಬರ ತೆಗೆದು ಮಡಿಗಳನ್ನು ಮತ್ತೆ ತ್ಯಾಜ್ಯ ಪದಾರ್ಥಗಳಿಂದ ತುಂಬಬೇಕು.

**ಎರೆಹುಳುವಿನ ವೈರಿಗಳು**

ಎರೆಹುಳು ಗೊಬ್ಬರ ತಯಾರು ಮಾಡುವಾಗ ಮಡಿಯಲ್ಲಿ ಹಲವಾರು ತರಹದ ವೈರಿಗಳು ಹುಳುಗಳಿಗೆ ಬಾಧೆ ಮಾಡುತ್ತವೆ. ವೈರಿ ಕೀಟಗಳು ಮತ್ತು ಭಕ್ಷಕಗಳು ಸಂಖ್ಯೆಯಲ್ಲಿ ಹೆಚ್ಚಾದಾಗ, ಎರೆಹುಳುಗಳು ಹೆಚ್ಚಿನ ಸಂಖ್ಯೆಯಲ್ಲಿ ನಾಶವಾಗುವವು. ಗೆದ್ದಲು, ಕೆಂಜಿಗ ಇರುವೆ, ಚಪ್ಪಟೆ ಹುಳು (ಪ್ಲ್ಯಾಟಿವರ್ಮ), ಕಪ್ಪೆ, ಹಂದಿ, ಪಕ್ಷಿಗಳು ಸಾಮಾನ್ಯವಾಗಿ ಕಾಣುವಂತಹ ವೈರಿಗಳು ಆಗಿವೆ. ಇವುಗಳಲ್ಲಿ ಗೆದ್ದಲು, ಚಪ್ಪಟೆ ಹುಳು ಮತ್ತು ಕೆಂಜಿಗ ಇರುವೆ ಅತೀ ಮುಖ್ಯವಾದ ವೈರಿಗಳು. ಕೆಂಪು ಮಣ್ಣಿನಲ್ಲಿ ಗೆದ್ದಲು ಮತ್ತು ಇರುವೆಯ ಬಾಧೆ ಹೆಚ್ಚಿಗೆ ಇರುವುದು. ಈ ವೈರಿ ಭಕ್ಷಕಗಳ ಬಾಧೆ ತಗಲುದಾಗ ಸೂಕ್ತ ಕ್ರಮಗಳನ್ನು ತೆಗೆದುಕೊಂಡು ಎರೆ ಮಡಿಗಳನ್ನು ರಕ್ಷಿಸಬೇಕು. ಬೇವಿನ ಹಿಂಡಿ, ಬೇವಿನ ಎಲೆಯ ಪುಡಿ, ಭಜೆ ಬೇರಿನ ಪುಡಿ, ಹಾಗೂ ಚದುರಂಗ ಎಲೆಯ ಪುಡಿಗಳನ್ನು ತ್ಯಾಜ್ಯ ಪದಾರ್ಥಗಳೊಂದಿಗೆ ಶೆ.2 ರಷ್ಟು ಉಪಯೋಗಿಸಿ ವೈರಿಗಳ ಬಾಧೆಯನ್ನು ಕಡಿಮೆ ಮಾಡಬಹುದಾಗಿದೆ.

**ಉತ್ಪಾದನೆಯ ಅಂಕಿ ಸಂಖ್ಯೆಗಳು**



ಎರೆಹುಳು ಗೊಬ್ಬರದ ಉತ್ಪಾದನೆಯು ನಾವು ಉಪಯೋಗಿಸುವ ತ್ಯಾಜ್ಯ ಪದಾರ್ಥದ ಮೇಲೆ ಅವಲಂಭಿತವಾರುತ್ತವೆ. ಪ್ರತಿಟನ್ ತ್ಯಾಜ್ಯ ಪದಾರ್ಥದಿಂದ 6 ರಿಂದ 7 ಕ್ವಿಂಟಲ್ ಗೊಬ್ಬರವನ್ನು ಪಡೆಯಲಿಕ್ಕೆ ಸಾಧ್ಯ ಎಂದು ಸಂಶೋಧನೆಯಿಂದ ತಿಳಿಯುತ್ತದೆ. ಒಂದು ಗುಂಟೆ ವಿಸ್ತೀರ್ಣದ ಮಡಿಗಳಲ್ಲಿ ಒಂದು ವರ್ಷದಲ್ಲಿ 20 ಟನ್ ತ್ಯಾಜ್ಯ ಪದಾರ್ಥಗಳನ್ನು ನಿರ್ವಹಿಸಿ 14 ರಿಂದ 15 ಟನ್ ಎರೆಹುಳು ಗೊಬ್ಬರ ಪಡೆಯಬಹುಧಾಗಿದೆ. ಎರೆಹುಳು, 90 ದಿವಸಗಳಲ್ಲಿ 10 ರಿಂದ 15 ರಷ್ಟು ಸಂಖ್ಯೆಯಲ್ಲಿ ವೃದ್ಧಿ ಹೊಂದುವದು ದೃಢಪಟ್ಟಿರುವುದು.

**ವರ್ಮಿವಾಷ್ ( ಬೆಳೆ ಪ್ರಚೋದಕ ಪದಾರ್ಥ):**



ಎರೆಹುಳುಗಳನ್ನು ಸಾಕಾಣಿಕೆ ಮಾಡಿದಾಗ (ಉದಾ: ಸಿಮೆಂಟ ಡೋಣಿ, ಪ್ಲಾಸ್ಟಿಕ್ ಡ್ರಮ್, ಮಣ್ಣಿನ ಪಾಟ್ ಅಥವಾ ಉಪಕರಣ ಇತ್ಯಾದಿಗಳಲ್ಲಿ) ಹುಳುವಿನ ಹಿಕ್ಕೆಗಳು ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹವಾದ ಸಮಯದಲ್ಲಿ ನೀರನ್ನು ಸಿಂಪರಣೆ ಮಾಡಿ ಸಾಕಾಣಿಕೆ ಘಟಕದಲ್ಲಿ ಹಾಯ್ದುಹೊರ ಬರುವಂತೆ ಮಾಡಲಾಗುವುದು. ಈ ರೀತಿಯಲ್ಲಿ ಸಂಗ್ರಹಿಸುವ ಪದಾರ್ಥಕ್ಕೆ ವರ್ಮಿವಾಷ್ ಅಥವಾ ಎರೆಜಲ ಎಂದು ಕರೆಯಲಾಗುವುದು. ವೈಜ್ಞಾನಿಕವಾಗಿ ಇದನ್ನು ಸಂಗ್ರಹಿಸಲು ಸಾಕಷ್ಟು ವಿಧಾನಗಳಿವೆ. ಎರೆ ಜಲವು ಬೆಳೆಗೆ ಬೇಕಾಗುವ ಹಲವಾರು ಪೋಷಕಾಂಶಗಳು ಮತ್ತು ಜೀವನಿರೋಧಕ ಪದಾರ್ಥಗಳನ್ನು ಹೊಂದಿರುತ್ತದೆ. ಇದನ್ನು ಬೆಳೆಗಳಿಗೆ ಸಿಂಪರಣೆ (ಸಾಮಾನ್ಯವಾಗಿ ನೀರಿನೊಡನೆ 1:1 ರಿಂದ 1:3 ಪ್ರಮಾಣದಲ್ಲಿ) ಮಾಡಿದಲ್ಲಿ, ಬೆಳೆಗಳಲ್ಲಿ ಉತ್ಪಾದನೆ, ಗುಣಮಟ್ಟ, ಕೀಟನಿರೋಧಕ ಶಕ್ತಿ ಹೆಚ್ಚುವುದು ಕಂಡು ಬಂದಿರುವುದು.

ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಐ.ಸಿ.ಎ.ಆರ್-ಕೃಷಿ ವಿಜ್ಞಾನ ಕೇಂದ್ರ, ಧಾರವಾಡ

# ಎರೆಹುಳು ಗೊಬ್ಬರ ಉತ್ಪಾದನಾ ತಾಂತ್ರಿಕತೆ






ವಿಸ್ತರಣಾ ಹಸ್ತ ಪತ್ರಿಕೆ

ಜನೇವರಿ 2018

ಲೇಖಕರು:
ಕಲಾವತಿ ಕೆ. ಕಂಬಳಿ
ವಿನುತಾ ಯು. ಮುಕ್ತಾಮಠ
ವಿಜಯಕುಮಾರ ಸಿ.
ಪ್ರಸನ್ನಕುಮಾರ ಬಿ.ಎಚ್.
ಅಕ್ಕಮಹಾದೇವಿ ಡಿ. ಅಗಸಿಮನಿ
ಜಯಶ್ರೀ ಪತ್ತಾರ

ಸಂಪಾದಕರು ಮತ್ತು ಪ್ರಕಾಶಕರು
ಡಾ. ಶುಭಾ ಎಸ್.
ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಧಾರವಾಡ

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು
ಕೃಷಿ ವಿಜ್ಞಾನ ಕೇಂದ್ರ, ಧಾರವಾಡ – ಫೋ: 0836-2444272

ರೈತನ ಮಿತ್ರ ಎಂದು ಕರೆಯಲ್ಪಡುವ ಎರೆಹುಳು, ನಿಸರ್ಗದಲ್ಲಿ ನಿರಂತರವಾಗಿ ಮಣ್ಣನ್ನು ಉಳುವಂತಹ ಜೀವಿ. ಮಣ್ಣಿನ ಫಲವತ್ತತೆ ಕಾಪಾಡುವಲ್ಲಿ ಎರೆಹುಳುಗಳ ಪಾತ್ರ ಪ್ರಮುಖವಾಗಿದೆ. ಎರೆಹುಳು ಸಾವಯವ ಪದಾರ್ಥಗಳನ್ನು ತಿಂದು, ತನ್ನ ಜಠರದಲ್ಲಿ ವಿಭಜಿಸಿ, ವಿವಿಧ ಪೋಷಕಾಂಶಗಳನ್ನು ಒಳಗೊಂಡ ಹಿಕ್ಕೆಗಳನ್ನು ಹಾಕುತ್ತದೆ. ಈ ಹಿಕ್ಕೆಗೆ ಎರೆಹುಳು ಗೊಬ್ಬರ ಎಂದು ಕರೆಯಲಾಗುತ್ತದೆ.

**ಎರೆಹುಳು ಗೊಬ್ಬರದಲ್ಲಿರುವ ಪೋಷಕಾಂಶಗಳು**

ಎರೆಹುಳು ಗೊಬ್ಬರ ಬೆಳೆಗಳಿಗೆ ಬೇಕಾಗುವ ಹಲವಾರು ಪೋಷಕಾಂಶಗಳು ಮತ್ತು ಸೂಕ್ಷ್ಮಾಣು ಜೀವಿಗಳನ್ನು ಹೊಂದಿರುತ್ತದೆ. ವಿವರಗಳನ್ನು ಕೆಳಗೆ ಕಾಣಿಸಿರುವ ಕೋಷ್ಟಕದಲ್ಲಿ ಕೊಡಲಾಗಿದೆ. (ಅಂದಾಜು ಪ್ರತಿ ಗ್ರಾಂ. ಗೆ).

| ಮುಖ್ಯ ಪೋಷಕಾಂಶಗಳು (%) | | | ಲಘು ಪೋಷಕಾಂಶಗಳು (PPM) | | |
|---|---|---|---|---|---|
| ಸಾ | ರಂ | ಪೊ | ತಾಮ್ರ | ಕಬ್ಬಿಣ | ಸತು |
| 1.10 | 0.86 | 0.98 | 52.0 | 930.0 | 186.6 |

| ಸೂಕ್ಷ್ಮಾಣು ಜೀವಿಗಳು(CFUs) | | |
|---|---|---|
| ಶಿಲೀಂಧ್ರ | ಬ್ಯಾಕ್ಟೀರಿಯಾ | ಆಯಾಕ್ಟಿನೊ ಮೈಸಿಟೀಸ್ |
| $2.65 \times 10^4$ | $11.37 \times 10^4$ | $10.43 \times 10^4$ |

ಇದಲ್ಲದೆ, ಇದು ಬೆಳೆ ಪ್ರಚೋದಕ ಪದಾರ್ಥಗಳಾದ ಜಿಬ್ಬರಲಿನ್, ಸೈಟೋಕೈನಿನ್, ಎನ್.ಎ.ಎ ಹಾಗೂ ಜೀವನಿರೋಧಕ ವಸ್ತುಗಳನ್ನು ಹೊಂದಿರುವುದರಿಂದ ಎರೆಹುಳು ಗೊಬ್ಬರ ಬೆಳೆಗಳಿಗೆ ಸತ್ವಭರಿತ ಸಂಪೂರ್ಣ ಸಾವಯವ ಗೊಬ್ಬರವಾಗಿರುವುದು.

**ಎರೆಹುಳು ಗೊಬ್ಬರ ತಯಾರಿಸಲು ಎರೆಹುಳು ಬಗೆಗಳು**

1. ಯುಡ್ರಿಲಸ್ ಯೂಜಿನೆ, 2. ಐಸಿನಿಯಾ ಫೊಯಟಿಡಾ 3. ಫೆರಿಯೋನಿಕ್ಸ ಹುಳುಗಳನ್ನು ಎಲ್ಲೆಡೆ ಸಾಮಾನ್ಯವಾಗಿ ಉಪಯೋಗಿಸಬಹುದು. ಇವುಗಳಲ್ಲಿ ಯುಡ್ರಿಲಸ್ ಹುಳು, ಕೃಷಿ ತ್ಯಾಜ್ಯ ಪದಾರ್ಥಗಳನ್ನು ನಿರ್ವಹಣೆ ಮಾಡಲಿಕ್ಕೆ ಅತ್ಯಂತ ಸೂಕ್ತ ತಳಿಯಾಗಿರುತ್ತದೆ. ಪ್ರಾಣಿಗಳ ಹಿಕ್ಕೆ ನಿರ್ವಹಿಸಲು ಐಸಿನಿಯಾ ಮತ್ತು ಪೆರಿಯೋನಿಕ್ಸ ಹುಳುಗಳು ಸೂಕ್ತ.

**ಉಪಯೋಗಿಸಬಹುದಾದ ತ್ಯಾಜ್ಯ ಪದಾರ್ಥಗಳು ಮತ್ತು ಉತ್ಪಾದನಾ ವಿಧಾನ**

ಕೃಷಿ ಬೆಳೆಗಳ ತ್ಯಾಜ್ಯ, ಕಳೆಗಳು, ಗಿಡ ತಪ್ಪಲುಗಳು ಹಾಗೂ ಪ್ರಾಣಿಗಳ ತ್ಯಾಜ್ಯ ಇತ್ಯಾದಿ ಸಾವಯುವ ಪದಾರ್ಥಗಳನ್ನು ಎರೆಹುಳು ಗೊಬ್ಬರ ಉತ್ಪಾದನೆಯಲ್ಲಿ ಉಪಯೋಗಿಸಬಹುದಾಗಿದೆ. ಬೇಗನೆ ಕೊಳೆಯುವ ಪದಾರ್ಥಗಳನ್ನು (ಉದಾ: ಕಳೆಗಳು, ಹಿಕ್ಕೆ ಮತ್ತು ಸಗಣಿ, ಬಯೋಗ್ಯಾಸ್ ಸ್ಲರಿ, ಕೆಲವೊಂದು ಕೃಷಿ ತ್ಯಾಜ್ಯಗಳು, ಹಳೆಯ ಹೊಟ್ಟು ಮತ್ತು ಎಲೆ ಇತ್ಯಾದಿ) ನೇರವಾಗಿ ಎರೆಹುಳು ಗೊಬ್ಬರ ತಯಾರಿಸುವ ಮಡಿಗಳಿಗೆ ಹಾಕಬಹುದಾಗಿದ್ದು, ಗಟ್ಟಿಯಾದ ಕೊಳೆಯಲಿಕ್ಕೆ ಬಹಳಷ್ಟು ಸಮಯ ತೆಗೆದುಕೊಳ್ಳುವ ಪದಾರ್ಥಗಳನ್ನು (ಉದಾ: ಬೆಳೆಗಳ ಕಟ್ಟಿಗೆ, ದಂಟು, ಕೋಲಿ, ಇತ್ಯಾದಿಗಳು) ವಿವಿಧ ವಿಧಾನಗಳಿಂದ ಮೊದಲೇ ಕೊಳೆಸಿ (ಪ್ರಿ–ಕಾಂಪೋಸ್ಟಿಂಗ್) ನಂತರ ಎರೆಹುಳು ಮಡಿಗಳಲ್ಲಿ ಉಪಯೋಗಿಸಬೇಕು. ಕಟ್ಟಿಗೆ, ದಂಟುಗಳನ್ನು ಕೊಳೆಸುವುದು, ಸಣ್ಣ ತಂಡುಗಳಾಗಿ ಕತ್ತರಿಸುವುದು, ಮೂತ್ರ–ಸಗಣಿಯ ಉಪಚಾರದಿಂದ ತ್ಯಾಜ್ಯ ಪದಾರ್ಥಗಳನ್ನು ಕೊಳೆಸುವುದು ಇತ್ಯಾದಿ ಪ್ರಿ–ಕಾಂಪೋಸ್ಟಿಂಗ್ ವಿಧಾನಗಳಾಗಿವೆ.

**ಎರೆಹುಳು ಗೊಬ್ಬರ ತಯಾರಿಸುವ ಪದ್ಧತಿಗಳು**




ಹಲವಾರು ಪದ್ಧತಿಗಳಲ್ಲಿ ಎರೆಹುಳು ಗೊಬ್ಬರ ತಯಾರಿಸಲಿಕ್ಕೆ ಸಾಧ್ಯವಿದೆ. ಶ್ರೇಷ್ಠ ದರ್ಜೆಯ ಗೊಬ್ಬರವನ್ನು, ಈ ಕೆಳಗೆ ತಿಳಿಸಿರುವ ಪದ್ಧತಿಗಳನ್ನು ಅಳವಡಿಸಿರುವುದರಿಂದ ಮಾಡಬಹುದಾಗಿದೆ.

**1. ಆಯತಾಕಾರದ ಗುಂಡಿ ಮಾದರಿಯ ಅಥವಾ ಕಲ್ಲಿನಿಂದ ನಿರ್ಮಿಸಿರುವ ಮಡಿಗಳು:**



ಮಡಿಗಳ ಅಳತೆ: 10.0 x 1.0 X 0.3 ಮೀ (ಉ x ಅ x ಎ)

ಮಡಿಗಳ ವಿನ್ಯಾಸ: ಎರಡು ಮಡಿಗಳ ನಡುವೆ 30 ಸೆಂ.ಮೀ. ಅಂತರದಂತೆ ಹಲವಾರು ಮಡಿಗಳನ್ನು ಒಂದು ಜಾಗದಲ್ಲಿ ತಯಾರು ಮಾಡುವುದು. ಈ ಮಡಿಗಳಲ್ಲಿ ನಂತರ ತ್ಯಾಜ್ಯ ಪದಾರ್ಥಗಳನ್ನು ಚಿತ್ರದಲ್ಲಿ ತೋರಿಸಿರುವಂತೆ (ವಿಧಾನದ ಕ್ರ. ಸಂ.2) ತುಂಬಿ ಕಾಂಪೋಸ್ಟಿಂಗ್ ಮಾಡಬೇಕು.

**2. ಆಯತಾಕಾರದ ಮಣ್ಣಿನ ಅಥವಾ ಸಿಮೆಂಟ ಇಟ್ಟಂಗಿ ಮಾದರಿ ಮಡಿಗಳು:**

ಮಡಿಗಳ ವಿನ್ಯಾಸ : 10.0 x 1.0 x 0.6 ರಿಂದ 0.75 ಮೀ (ಉ x ಅ x ಎ) ಅಳತೆಯ, ಜೋಡಿ ಅಂಕಣದಂತೆ, ಅವಶ್ಯಕತೆಗೆ ಅನುಗುಣವಾಗಿ ಹಲವಾರು ಅಂಕಣಗಳನ್ನು ತಯಾರು ಮಾಡುವುದು ಸೂಕ್ತವಾಗಿರುತ್ತದೆ. ನಡುವಿನ ಗೋಡೆಗೆ ಕಿಂಡಿಗಳನ್ನು ಕೊಡುವುದರಿಂದ ಹುಳಗಳ ಚಲನೆಗೆ (ಒಂದರಿಂದ ಇನ್ನೊಂದು ಅಂಕಣಕ್ಕೆ) ಅನುವು ಮಾಡಿದಂತಾಗುತ್ತದೆ. ಮೇಲೆ ಹೇಳಿದಂತೆ ವಿವಿಧ ತ್ಯಾಜ್ಯ ಪದಾರ್ಥಗಳನ್ನು ಅಂಕಣಗಳಲ್ಲಿ ತುಂಬಿ ಕಾಂಪೋಸ್ಟಿಂಗ ಪ್ರಾರಂಭಿಸಬೇಕು.

**3. ಗುಂಪಿ ಮಾದರಿಯ ಮಡಿಗಳು:**





5 ರಿಂದ 10 x 1.0 x 1.0ಮೀ (ಉ x ಅ x ಎ) ಅಳತೆಯ ಮಡಿಗಳ ಗುಂಪಿಗಳನ್ನು ಗುಂಡಿ ಪದ್ಧತಿಯಲ್ಲಿ ಹೇಳಿರುವಂತೆ ತ್ಯಾಜ್ಯಗಳನ್ನು ಉಪಯೋಗಿಸಿ ತಯಾರು ಮಾಡಬೇಕು.

**ಎರೆಹುಳು ಗೊಬ್ಬರ ತಯಾರಿಸುವ ವಿಧಾನ**

ಸಾವಯವ ತ್ಯಾಜ್ಯ ಪದಾರ್ಥಗಳನ್ನು ಸಂಗ್ರಹಿಸುವುದು ಮತ್ತು ಅವಶ್ಯಕತೆಗೆ ಅನುಗುಣವಾಗಿ ಉಪಚಾರ ಮಾಡುವುದು. ಈ ಕಾರ್ಯವನ್ನು ಎರೆಹುಳು ಗೊಬ್ಬರ ಉತ್ಪಾದನಾ ಘಟಕದ ಹತ್ತಿರವೇ ಮಾಡುವುದು ಸೂಕ್ತವಾದ ಕ್ರಮ.

ತ್ಯಾಜ್ಯ ಪದಾರ್ಥಗಳನ್ನು ಈ ಕೆಳಗೆ ಚಿತ್ರದಲ್ಲಿ ತೋರಿಸಿದಂತೆ ತುಂಬುವುದು ಸೂಕ್ತವಾಗಿರುತ್ತದೆ.

| | |
|---|---|
| ಸೋಗೆಯ/ಹುಲ್ಲಿನ/ಗರಿಯ ಹೊದಿಕೆ | 1" ದಪ್ಪ |
| ಸಗಣಿ/ ತಿಪ್ಪೆ ಗೊಬ್ಬರ | 1" ದಪ್ಪ |
| ಮೊದಲೇ ಕೊಳಿಸಿದ ತ್ಯಾಜ್ಯ + ಹಸಿರು ಕಳೆಗಳು | 8" ದಪ್ಪ |
| ಸಗಣಿ / ಕೊಟ್ಟಿಗೆ ಗೊಬ್ಬರ | 1" ದಪ್ಪ |
| ಮೊದಲೇ ಕೊಳಿಸಿದ ತ್ಯಾಜ್ಯ + ಹಸಿರು ಕಲೆಗಳು | 8" ದಪ್ಪ |
| ಗಟ್ಟಿಯಾದ ಪದಾರ್ಥ (ಕಟ್ಟಿಗೆ, ನಾರು, ತೆಂಗಿನ ಸಿಪ್ಪೆ) | 3" ದಪ್ಪ |

1. ತ್ಯಾಜ್ಯ ಪದಾರ್ಥಗಳನ್ನು ಮಡಿಗಳಲ್ಲಿ ತುಂಬಿದ ನಂತರ ಒಂದು ವಾರದವರೆಗೆ ತ್ಯಾಜ್ಯಗಳು ಸರಿಯಾಗಿ ಹಸಿಯಾಗುವಂತೆ ನೀರನ್ನು ಸಿಂಪರಣೆ ಮಾಡಬೇಕು. ನಂತರ ಮಡಿಗಳಿಗೆ ಎರೆಹುಳುಗಳನ್ನು (ಪ್ರತಿ ಮೀ. ಮಡಿಯ ಉದ್ದಕ್ಕೆ 100 ಹುಳುಗಳಂತೆ) ಬಿಡಬೇಕು. ಹುಳುಗಳನ್ನು